**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಏಳನೇ ಅಧಿವೇಶನ**

# ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–51)**

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂ. 10) ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 1962ರ ಕರ್ನಾಟಕ ಅಧಿನಿಯಮ ಸಂ.10ರ ತಿದ್ದುಪಡಿ.-** ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂ. 10)ರಲ್ಲಿನ,-

(i) 109ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (1ಎ)ರಲ್ಲಿನ ಪರಂತುಕದಲ್ಲಿ "ಅರ್ಧ ಹೆಕ್ಟೇರ್" ಎಂಬ ಪದಗಳ ಬದಲಿಗೆ "ನಾಲ್ಕು ಹೆಕ್ಟೇರ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪ-ಪ್ರಕರಣ (2)ರಲ್ಲಿನ ಪರಂತುಕದಲ್ಲಿ"ಸರ್ಕಾರವು ಅನುಮತಿಸಿದ ಮೇರೆಗೆ ಅದೇ ಉದ್ದೇಶಕ್ಕಾಗಿ ಭೂಮಿಯನ್ನು ಮಾರಾಟ ಮಾಡಬಹುದು" ಎಂಬ ಪದಗಳ ಬದಲಿಗೆ "ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿನ ಉನ್ನತಾಧಿಕಾರ ಸಮಿತಿಯು ಅನುಮತಿಸಿದ ಮೇರೆ ಯಾವುದೇ ಉದ್ದೇಶಕ್ಕಾಗಿ ಭೂಮಿಯ ಬಳಕೆ ಅಥವಾ ಮಾರಾಟ ಮಾಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) 124ನೇ ಪ್ರಕರಣದಲ್ಲಿ "ಭಾರತ ದಂಡ ಸಂಹಿತೆಯ 193, 219 ಮತ್ತು 228ನೇ ಪ್ರಕರಣಗಳ" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ "ಭಾರತ ನ್ಯಾಯ ಸಂಹಿತೆ, 2023ರ 229,257 ಮತ್ತು 267ನೇ ಪ್ರಕರಣಗಳ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

(iii) 125ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿನ ಕೋಷ್ಟಕದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**ಕೋಷ್ಟಕ**

| **ಪ್ರಕರಣ** | **ವಿಧಿಸಬಹುದಾದ ದಂಡನೆ (ರೂ.)** |
|---|---|
| ಪ್ರಕರಣ 12 | 5,000 |
| ಪ್ರಕರಣ 33 | 2,500 |
| ಪ್ರಕರಣ 41 | 5,000 |
| ಪ್ರಕರಣ 129 | 1,000 |

(ಬಿ) ಉಪ-ಪ್ರಕರಣ (1ಎ) ರಲ್ಲಿ "ಆರು ತಿಂಗಳುಗಳಿಗಿಂತ ಕಡಿಮೆಯಿರದಂಥ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂತ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐವತ್ತು ಸಾವಿರ ರೂಪಾಯಿಗಳ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 1964ರ ಕರ್ನಾಟಕ ಅಧಿನಿಯಮ ಸಂ.12ರ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರಲ್ಲಿ,-

(i) 94ಬಿ ಪ್ರಕರಣದ ಉಪ-ಪ್ರಕರಣ (1)ರಲ್ಲಿ "ಇಪ್ಪತ್ತೆರಡು ವರ್ಷಗಳೊಳಗೆ" ಎಂಬ ಪದಗಳ ಬದಲಿಗೆ "ಇಪ್ಪತ್ತಾರು ವರ್ಷಗಳೊಳಗೆ" ಎಂಬ ಪದಗಳನ್ನು ಯಾವಾಗಿನಿಂದಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು;

(ii) 95ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (2)ರ ಖಂಡ (ii)ರಲ್ಲಿನ ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗಿ 2.00 ಎಕರೆಗಳವರೆಗೆ ಕೃಷಿ ಭೂಮಿಯನ್ನು ಬಳಸಿದಲ್ಲಿ, ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಬದಲಾಯಿಸುವುದು ಅಗತ್ಯವಿರತಕ್ಕದ್ದಲ್ಲ."

(ಬಿ) ಉಪ-ಪ್ರಕರಣ (10)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(10) ಉಪ-ಪ್ರಕರಣ (2)ರಡಿಯಲ್ಲಿ ಅಗತ್ಯಪಡಿಸಲಾದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯ ಪರಿವರ್ತನೆಯನ್ನು, ಉಪ-ಪ್ರಕರಣ (7)ರಡಿಯಲ್ಲಿ ಸಂಬಂದಪಟ್ಟ ಪ್ರಾಧಿಕಾರಗಳಿಗೆ ನಿಯಮಿಸಲಾದ ಶುಲ್ಕಗಳ ಪಾವತಿಗೊಳಪಟ್ಟು, ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸ್ಥಾಪಿಸಲು ಅಗತ್ಯವಿರುವ ಭೂ ಭಾಗಗಳಿಗೆ ವಿನಾಯಿತಿಸತಕ್ಕದ್ದು."

(iii) 192-ಎ ಪ್ರಕರಣದಲ್ಲಿನ ಕೋಷ್ಟಕದ 5ನೇ ಕ್ರಮ ಸಂಖ್ಯೆಯಲ್ಲಿನ ನಮೂದುಗಳ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"

| | | |
|---|---|---|
| 5 | ಕೃಷಿಯೇತರ ಉದ್ದೇಶಕ್ಕಾಗಿ ಯಾವುದೇ ಕೃಷಿ ಭೂಮಿಯನ್ನು ಸಕ್ರಮ ಪ್ರಾಧಿಕಾರದಿಂದ ಪರಿವರ್ತನೆಗೊಳಿಸಿಕೊಳ್ಳದಯೇ ಅಥವಾ ಮುಂಚಿತವಾಗಿ ಅನುಮೋದನೆ ಪಡೆಯದಯೇ ಮಾರಾಟ ಮಾಡಿದರೆ:<br><br>ಪರಂತು, ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವುದರ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಒಂದು ಲಕ್ಷ ರೂಪಾಯಿಗಳ ದಂಡ |

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂ. 10) ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) 2025-26ನೇ ಸಾಲಿನ ಆಯವ್ಯಯ ಭಾಷಣವನ್ನು ಜಾರಿಗೊಳಿಸಲು;

(ii) ಶುದ್ಧ ಇಂಧನದ

(iii) ಉತ್ಪಾದನೆಗಾಗಿ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಉತ್ತೇಜಿಸಲು; ಮತ್ತು

(iv) ಜನ ವಿಶ್ವಾಸ್ (ಉಪಬಂಧಗಳ ತಿದ್ದುಪಡಿ) ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ 18)ರ ಅನುಸಾರವಾಗಿ ಉಪಬಂಧಗಳನ್ನು ಅಳವಡಿಸಿಕೊಳ್ಳಲು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಭೂ ಸುಧಾರಣೆಗಳ ಅಧಿನಿಯಮ, 1961

## (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) ಉದ್ಧೃತ ಭಾಗ

**XXX XXX XXX**

**109. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ ನೀಡುವುದು.-** (1) ನಿಯಮಿಸಬಹುದಾದಂಥ ನಿಯಮಗಳಿಗೆ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಯಾವುದೇ ಪ್ರದೇಶದಲ್ಲಿರುವ ಯವುದೇ ಭೂಮಿಗೆ,-

(i) ನಲವತ್ತು ಘಟಕಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿಗಾಗಿ;

**ವಿವರಣೆ.-**"ಕೈಗಾರಿಕಾ ಅಭಿವೃದ್ಧಿ"ಯು ಸಣ್ಣ ಖನಿಜಗಳ ಗಣಿಗಾರಿಕೆ, ಅದನ್ನು ನಿರ್ದಿಷ್ಟಪಡಿಸಿರಲಿ ಅಥವಾ ನಿರ್ದಿಷ್ಟಪಡಿಸದಿರಲಿ ಮತ್ತು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 8) ಅಡಿಯಲ್ಲಿನ ಕಲ್ಲುಪುಡಿ ಮಾಡುವ ಚಟುವಟಿಕೆಯನ್ನು ಒಳಗೊಳ್ಳುತ್ತದೆ.

ಪರಂತು, ಕೈಗಾರಿಕಾ ಅಭಿವೃದ್ಧಿಯ ಸಂಬAಧದಲ್ಲಿ, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) ಅಡಿಯಲ್ಲಿ ರಚಿಸಲಾದ ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯ ಅನುಮೋದನೆಯೊಂದಿಗೆ ಸರ್ಕಾರವು ಅನುಮೋದಿಸಿದ ಅಂಥ ಭೂಮಿಯನ್ನು ಅಂಥ ವ್ಯಾಪ್ತಿಯವರೆಗೆ, 63 ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ಸರ್ಕಾರವು ವಿನಾಯಿಸಿದೆ ಎಂಬುದಾಗಿ ಭಾವಿಸತಕ್ಕದ್ದು.

(ii) ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ ಬಳಸಲಾಗುವ ಎಂಟು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ ಬಳಸಲಾಗುವ;

(iii) ಮಾನ್ಯತೆ ಪಡೆದ ಅಥವಾ ನೋಂದಾಯಿತ ಸಂಸ್ಥೆಯು ಸ್ಥಾಪಿಸಿರುವ ಅಥವಾ ನಿರ್ಮಿಸಿರುವ, ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದಿಷ್ಟಪಡಿಸುವ ಪೂಜಾ ಸ್ಥಳಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ, ಬಳಸಲಾಗುವ ಎರಡು ಯುನಿಟ್‌ಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(iv) ರಾಜ್ಯ ಸರ್ಕಾರದಿಂದ ಅನುಮೋದಿತವಾದ ವಸತಿ ಯೋಜನೆಗಾಗಿ ಬಳಸಲಾಗುವ ಇಪ್ಪತ್ತು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(v) ಪುಷ್ಪ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಗಳೂ ಸೇರಿದಂತೆ ತೋಟಗಾರಿಕೆ ಉದ್ದೇಶಕ್ಕಾಗಿ ಬಳಸಲಾಗುವ ನಲವತ್ತು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ,

- ಯಾವುದೇ ಪ್ರದೇಶದಲ್ಲಿರುವ ಯಾವುದೇ ಭೂಮಿಗೆ 63, 79ಎ, 79ಬಿ ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ವಿನಾಯಿತಿ ನೀಡಬಹುದು:

3[ಪರಂತು, ಜಿಲ್ಲಾಧಿಕಾರಿಯವರು ಸಹ,

(i) ಕೈಗಾರಿಕಾ ಅಭಿವೃದ್ಧಿಗಾಗಿ ಬಳಸಲಾಗುವ ಇಪ್ಪತ್ತು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(ii) ಕೃಷಿಯೇತರ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಿಗಾಗಿ ಬಳಸಲಾಗುವ ನಾಲ್ಕು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(iii) ಕೃಷಿಯೇತರ ಉದ್ದೇಶಕ್ಕಾಗಿ, ಮಾನ್ಯತೆ ಪಡೆದ ಅಥವಾ ನೋಂದಾಯಿತ ಸಂಸ್ಥೆಯು ಸ್ಥಾಪಿಸಿರುವ ಅಥವಾ ನಿರ್ಮಿಸಿರುವ, ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದಿಷ್ಟಪಡಿಸುವ ಪೂಜಾ ಸ್ಥಳಗಳಿಗಾಗಿ ಬಳಸಲಾಗುವ ಅರ್ಧ ಯುನಿಟಿಗಿಂತ (2.22 ಎಕರೆ) ಹೆಚ್ಚಿಲ್ಲದ ವಿಸ್ತೀರ್ಣದ;

(iv) ರಾಜ್ಯ ಸರ್ಕಾರದಿಂದ ಅನುಮೋದಿತವಾದ ವಸತಿ ಯೋಜನೆಗಳಿಗಾಗಿ ಬಳಸಲಾಗುವ ಇಪ್ಪತ್ತು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(v) ಪುಷ್ಪ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಗಳೂ ಸೇರಿದಂತೆ ತೋಟಗಾರಿಕೆ ಉದ್ದೇಶಕ್ಕಾಗಿ ಬಳಸಲಾಗುವ ಇಪ್ಪತ್ತು ಯುನಿಟಿಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ

- ಭೂಮಿಯ ಸಂಬಂಧದಲ್ಲಿ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳಿಗೆ ಒಳಪಟ್ಟು ಹಾಗೂ ಅಂಥ ರೀತಿಯಲ್ಲಿ ಈ ಉಪಪ್ರಕರಣದ ಮೇರೆಗೆ ಸರ್ಕಾರಕ್ಕೆ ಇರುವ ಅಧಿಕಾರಗಳನ್ನು ಚಲಾಯಿಸಬಹುದು.

(1ಎ) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು ಸಾರ್ವಜನಿಕ ಹಿತ ದೃಷ್ಟಿಯಿಂದ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅಧಿಸೂಚನೆಯ ಮೂಲಕ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ಯಾವುದೇ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಗೆ 63, ಅಥವಾ 80ನೇ ಉಪಬಂಧಗಳಿಂದ ವಿನಾಯಿತಿ ನೀಡಬಹುದು:

ಪರಂತು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಮತ್ತು ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಬಿಟ್ಟು ಉಳಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳು,]6 ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳಿಗೆ ಒಳಪಟ್ಟು ಮತ್ತು ಅಂತಃ ರೀತಿಯಲ್ಲಿ ಅರ್ಧ ಹೆಕ್ಟೆರ್ ಮೀರದ ವಿಸ್ತೀರ್ಣದ ಭೂಮಿಗೆ ವಿನಾಯಿತಿಗಳನ್ನು ನೀಡಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರವನ್ನು ಚಲಾಯಿಸಬಹುದು.

**XXX XXX XXX**

(2)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತು ಅಥವಾ ನಿಬಂಧನೆಯನ್ನು ಉಲ್ಲಂಘಿಸಿದ್ದು ಕಂಡು ಬಂದರೆ ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸುವ ಮೂಲಕ ಆ ಉಪಪ್ರಕರಣದ ಮೇರೆಗೆ ಮಂಜೂರು ಮಾಡಿದ ವಿನಾಯಿತಿಯನ್ನು ರದ್ದುಪಡಿಸಬಹುದು ಮತ್ತು ಹಾಗೆ ರದ್ದುಪಡಿಸಲಾದ ಭೂಮಿಗೆ ಸಂಬಂಧಪಟ್ಟಂತೆ ದಂಡವನ್ನಾಗಿ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರದಲ್ಲಿ ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ನಿಹಿತದಲ್ಲಿಟ್ಟುಕೊಳ್ಳತಕ್ಕದ್ದು. ಅದರ ಸಂಬಂಧವಾಗಿ, ಯಾವುದೇ ಮೊತ್ತವನ್ನಾಗಲೀ ಸಂದಾಯಿಸಬೇಕಾಗಿಲ್ಲ.

ಪರಂತು (1)ನೇ ಉಪಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಪಡೆದ ತರುವಾಯ ಯಾವುದೇ ಕಂಪನಿ ಅಥವಾ ಸಂಸ್ಥೆಯು ಭೂಮಿಯನ್ನು ಖರೀದಿಸಿ ಮತ್ತು ಖರೀದಿಯ ಉದ್ದೇಶಕ್ಕಾಗಿ ಏಳು ವರ್ಷಗಳಿಗೆ ಕಡಿಮೆಯಲ್ಲದಂತೆ ಭೂಮಿಯನ್ನು ಬಳಸಿದ ತರುವಾಯ, ಅಂಥ ಕಂಪನಿ ಅಥವಾ ಸಂಸ್ಥೆಯು ಅದರ ಹತೋಟಿಯಲ್ಲಿರದ ಹಲವಾರು ಕಾರಣಗಳಿಗಾಗಿ ಭೂಮಿಯ ಬಳಕೆಯನ್ನು ಮುಂದುವರೆಸದೇ ಇದ್ದಲ್ಲಿ, ನಿಯಮಗಳ ಅಡಿಯಲ್ಲಿ ಹಾಗೆ ಅನುಮತಿಸಿದ ಅಂಥ ಖರೀದಿಯ ದಿನಾಂಕದಿಂದ ಏಳು ವರ್ಷಗಳ ತರುವಾಯ, ಅರ್ಜಿಯನ್ನು ಸಲ್ಲಿಸಿ, ಸರ್ಕಾರವು ಅನುಮತಿಸಿದ ಮೇರೆಗೆ ಅದೇ ಉದ್ದೇಶಕ್ಕಾಗಿ ಭೂಮಿಯನ್ನು ಮಾರಾಟ ಮಾಡಬಹುದು.

**XXX XXX XXX**

**124. ವಿಚಾರಣೆಗಳು ಮತ್ತು ವ್ಯವಹರಣೆಗಳು.-** ಡೆಪ್ಯುಟಿ ಕಮೀಷನರನ, ನ್ಯಾಯಾಧಿಕರಣದ, ಅಸಿಸ್ಟೆಂಟ್ ಕಮೀಷರನ ಅಥವಾ ತಹಸೀಲ್ದಾರನ ಅಥವಾ ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದಿರುವ ಎಲ್ಲ ವಿಚಾರಣೆಗಳು ಮತ್ತು ವ್ಯವಹರಣೆಗಳು ಭಾರತ ದಂಡ ಸಂಹಿತೆಯ 193, 219 ಮತ್ತು

228ನೇ ಪ್ರಕರಣಗಳ ಅರ್ಥದಲ್ಲಿ ನ್ಯಾಯಿಕ ವ್ಯವಹರಣೆಗಳಾಗಿರುವಂತೆ ಭಾವಿಸಲ್ಪಡತಕ್ಕದ್ದು.ಮೊತ್ತವನ್ನಾಗಲೀ ಸಂದಾಯಿಸಬೇಕಾಗಿಲ್ಲ.

**XXX XXX XXX**

125. ಅಪರಾಧಗಳು ಮತ್ತು ದಂಡಗಳು.- (1) ಈ ಕೆಳಕಂಡ ಪಟ್ಟಿಯ ಮೊದಲನೆಯ ಅಂಕಣದಲ್ಲಿ ನಮೂದಿಸಿರುವ ಯಾವುದೇ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮ್ಯಾಜಿಸ್ಟ್ರೇಟನಿಂದ ಅಪರಾಧ ಸಿದ್ಧವಾದ ಮೇಲೆ ಅಂಥ ಪ್ರತಿಯೊಂದು ಅಪರಾಧದ ಬಗ್ಗೆ ಸದರಿ ಪಟ್ಟಿಯ ಎರಡನೆಯ ಅಂಕಣದಲ್ಲಿ ಆ ಬಗ್ಗೆ ನಮೂದಿಸಿರುವ ಮೊಬಲಗಿನವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಪಟ್ಟಿ

| ಪ್ರಕರಣ | ವಿಧಿಸಬಹುದಾದ ಜುಲ್ಮಾನೆ |
|---|---|
| 1 | 2 |
| 12ನೇ ಪ್ರಕರಣ | ರೂ.ಗಳು<br>1000 |
| 33ನೇ ಪ್ರಕರಣ | 500 |
| 41ನೇ ಪ್ರಕರಣ | 1000 |
| 129ನೇ ಪ್ರಕರಣ | 250 |

**XXX XXX XXX**

## ಕರ್ನಾಟಕ ಭೂ ಕಂದಾಯ ಅಧಿನಿಯಮ, 1964
## (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಉದ್ಧೃತ ಭಾಗ

**XXX XXX XXX**

**94ಬಿ. ಕೆಲವು ಪ್ರಕರಣಗಳಲ್ಲಿ ಭೂ ಮಂಜೂರಾತಿ.-** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಡೆಪ್ಯೂಟಿ ಕಮಿಷನರ್ ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತಗೊಂಡ ಇತರ ಅಧಿಕಾರಿಗೆ, ಸೂಕ್ತವೆಂದು ತಾನು ಭಾವಿಸಬಹುದಾಂಥ ವಿಚಾರಣೆಯನ್ನು ನಡೆಸಿದ ತರುವಾಯ ಯಾರೇ ವ್ಯಕ್ತಿಯು.-

(i) 1990 ರ ಏಪ್ರಿಲ್ ಹದಿನಾಲ್ಕನೇ ದಿನಾಂಕಕ್ಕೆ ಮುಂಚೆ, 79ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಭೂಮಿಯೂ ಸೇರಿದಂತೆ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗ ಹೊಂದಿದ್ದು 94ನೇ ಪ್ರಕರಣದ ಮೇರೆಗೆ ಹೊರಹಾಕುವುದಕ್ಕೆ ಗುರಿಯಾಗುತ್ತಾನೆಂದು; ಮತ್ತು

(ii) ಪ್ರಕರಣ 94ಎ ಮೇರೆಗೆ ಅಂಥ ಭೂಮಿಯನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಅರ್ಹನಾಗಿದ್ದು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸದರಿ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಅಂಥ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ವಿಫಲನಾಗಿದ್ದಾನೆಂದು; ಮತ್ತು

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಕಾರಣದಿಂದ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಅರ್ಹನಾಗಿರುವ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ;

(iii) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1997 ಜಾರಿಗೆ ಬಂದ ದಿನಾಂಕದಂದು ಅಂಥ ಭೂಮಿಯ ವಾಸ್ತವಿಕ ಸ್ವಾಧೀನತೆಯು ಮುಂದುವರಿದಿದ್ದಾನೆಂದು;

ಮನವರಿಕೆಯಾದರೆ ಆ ಅಧಿಕಾರಿಯು, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2000 ಜಾರಿಗೆ ಬಂದ ದಿನಾಂಕದಿಂದ ಇಪ್ಪತ್ತೆರಡು ವರ್ಷಗಳೊಳಗೆ ಮತ್ತು ನಿಗದಿಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಸಂದರ್ಭಾನುಸಾರ, 94ಎ ಪ್ರಕರಣದ ಮೇರೆಗೆ ರಚಿಸಿದ ಸಮಿತಿಗೆ ಅಥವಾ ಹೆಚ್ಚುವರಿ ಸಮಿತಿಗೆ ಶಿಫಾರಸ್ಸುಗಳನ್ನು ಮಾಡಬಹುದು ಮತ್ತು ಅಂಥ ಸಮಿತಿಯ ಶಿಫಾರಸನ್ನು ಸ್ವೀಕರಿಸಿದ ಮೇಲೆ ಅಂಥ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು;

ಪರಂತು, ಅದೇ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಯಾರೇ ಇತರ ವ್ಯಕ್ತಿಯು 94ಎ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿದ್ದು, ಆ ಪ್ರಕರಣದ ಮೇರೆಗೆ ಪರಿಗಣಿಸಲು ಬಾಕಿ ಇದ್ದರೆ, ಸಂದರ್ಭಾನುಸಾರ, ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು, ಈ ಉಪ-ಪ್ರಕರಣದ ಮೇರೆಗೆ ಭೂಮಿಯನ್ನು ಮಂಜೂರು ಮಾಡುವುದಕ್ಕೂ ಮುಂಚೆ ಅಂಥ ಇತರೆ ವ್ಯಕ್ತಿಯ ಕ್ಲೇಮನ್ನು ಪರಿಶೀಲಿಸತಕ್ಕದ್ದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಮಂಜೂರು ಮಾಡಲು, ಅರಣ್ಯ ಸಂರಕ್ಷಣೆ ಅಧಿನಿಯಮ, 1980 (1980ರ ಕೇಂದ್ರ ಅಧಿನಿಯಮ 69) 2ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದಿಂದ ಮುಂಚಿತವಾಗಿಯೇ ಅನುಮೋದನೆ ಪಡೆಯುವ ಅಗತ್ಯ ಇದ್ದರೆ, ಹಾಗೆ ಅನುಮತಿ ಪಡೆಯದೆ ಅಂಥ ಮಂಜೂರಾತಿಯನ್ನು ಮಾಡತಕ್ಕದ್ದಲ್ಲ.

(2) 94ಎ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿರುವ ಕೋಷ್ಟಕ ಹಾಗೂ ವಿವರಣೆ ಮತ್ತು (5)ನೇ ಹಾಗೂ (6)ನೇ ಉಪ-ಪ್ರಕರಣಗಳೂ ಒಳಗೊಂಡAತೆ ಮೊದಲನೆಯ ಪರಂತುಕದ, ಎರಡನೆಯ ಪರಂತುಕದ ಉಪಬಂಧಗಳು, (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಭೂ ಮಂಜೂರಾತಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಈ ಪ್ರಕರಣದಲ್ಲಿ ಏನೇ ಇದ್ದರೂ, 79ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಭೂಮಿಯನ್ನು ಹೊರತುಪಡಿಸಿ, ಅರಣ್ಯ ಭೂಮಿಯೆಂದು ವರ್ಗೀಕರಿಸಿದ ಅರಣ್ಯ ಭೂಮಿಗೆ ಅನ್ವಯವಾಗತಕ್ಕದ್ದಲ್ಲ.

**XXX XXX XXX**

**95. ಬೇಸಾಯದ ಭೂಮಿಯ ಬಳಕೆಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಬಳಸುವ ಬಗೆಗಿನ ವಿಧಾನ.- XXX XXX XXX**

(2) ಕಂದಾಯದ ನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬದಲಿಸಲು ಇಚ್ಛಿಸಿದರೆ, ಆತನು ನೇಮಿಸಬಹುದಾದಂಥ ರೀತಿಯಲ್ಲಿ ಒಂದು ಅಫಿಡಾವಿಟ್ ಜೊತೆಗೆ ಜಿಲ್ಲಾಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು,-

(i) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳ ಮೇರೆಗೆ ಸಂಬಂಧಪಟ್ಟ ಭೂಮಿಯ ಸಂಬಂಧದಲ್ಲಿ ಯುಕ್ತವಾಗಿ ಪ್ರಕಟಿಸಲಾದ ಮಾಸ್ಟರ್ ಪ್ಲಾನ್‌ನಲ್ಲಿ ನಿರ್ದಿಷ್ಟಪಡಿಸಿದ ಬಳಕೆಗೆ ಅನುಸಾರವಾಗಿ ಅಂಥ ಭೂಮಿಯು ಕಂದಾಯ ನಿರ್ಧರಣೆಯಾಗಿದ್ದು ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿದ್ದಲ್ಲಿ, ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆಗೆ ಡೆಪ್ಯುಟಿ ಕಮಿಷನರ ಅನುಮತಿಯ ಅಗತ್ಯವಿರುವುದಿಲ್ಲ:

ಪರಂತು, ಪ್ರಾಧಿಕಾರದಿಂದ ಅಗತ್ಯ ಅನುಮತಿಯನ್ನು ಪಡೆಯುವ ಸಮಯದಲ್ಲಿ ನಗರ ಯೋಜನಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ಸ್ವಯಂ ಘೋಷಣೆಯೊಂದಿಗೆ ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

ಮತ್ತು ಪರಂತು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961(1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳ ಮೇರೆಗೆ ಸಂಬಂಧಪಟ್ಟ ಭೂಮಿಯ ಸಂಬಂಧದಲ್ಲಿ

ಯುಕ್ತವಾಗಿ ಪ್ರಕಟಿಸಲಾದ ಮಾಸ್ಟರ್ ಪ್ಲಾನ್‌ನಲ್ಲಿ ನಿರ್ದಿಷ್ಟಪಡಿಸಿದ ಭೂ ಬಳಕೆಗೆ ಅನುಸಾರವಾಗಿ ಅಂಥ ಭೂಮಿಗಳು ಕಂದಾಯ ನಿರ್ಧರಣೆಯಾಗಿದ್ದಲ್ಲಿ ಅಥವಾ ಕೃಷಿಯ ಉದ್ದೇಶಕ್ಕೆಂದು ಗೊತ್ತುಪಡಿಸಿದ್ದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗಾಗಿ ಎರಡು ಎಕರೆಗಳವರೆಗಿನ ಕೃಷಿ ಭೂಮಿಯನ್ನು ಬಳಕೆ ಮಾಡಿಕೊಂಡಿದ್ದಲ್ಲಿ, ಕೃಷಿಯೇತರ ಉದ್ದೇಶಕ್ಕಾಗಿ ಭೂ ಬದಲಾವಣೆಯನ್ನು ಅಗತ್ಯಪಡಿಸತಕ್ಕದ್ದಲ್ಲ.

(ii) ಕಂದಾಯ ನಿರ್ಧರಣೆಯಾಗಿರುವ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಯಾರೇ ಅಧಿಭೋಗದಾರನು ಮಾಸ್ಟರ್ ಪ್ಲಾನ್ ಪ್ರಕಟಿಸದಿರುವಂಥ ಸ್ಥಳೀಯ ಯೋಜನಾ ಪ್ರದೇಶದ ಹೊರಗಿರುವ ಅಂಥ ಭೂಮಿಯನ್ನು ಅಥವಾ ಅದರ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಪರಿವರ್ತಿಸಲು ಬಯಸಿದಲ್ಲಿ, ಅರ್ಜಿದಾರನು ನಿಯಮಿಸಬಹುದಾದಂಥ ರೀತಿಯಲ್ಲಿ ಡೆಪ್ಯುಟಿ ಕಮಿಷನರ್‌ಗೆ ಅಫಿಡಾವಿಟ್‌ನೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ಪ್ರಾಧಿಕಾರಗಳು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ತಮ್ಮ ಅಭಿಪ್ರಾಯವನ್ನು ಒದಗಿಸತಕ್ಕದ್ದು. ಡೆಪ್ಯುಟಿ ಕಮಿಷನರನು ಸಂಬಂಧಪಟ್ಟ ಪ್ರಾಧಿಕಾರಗಳು ಒದಗಿಸಿದ ಅಭಿಪ್ರಾಯಗಳಿಗೊಳಪಟ್ಟು ಮತ್ತು ಉಪಪ್ರಕರಣ (7)ರಡಿಯಲ್ಲಿ ನಿಯಮಿಸಲಾದ ಶುಲ್ಕ ಪಾವತಿಗೊಳಪಟ್ಟು, ಅರ್ಜಿಯನುಸಾರವಾಗಿ ಭೂ ಪರಿವರ್ತನೆಗೆ ಅನುಮೋದನೆಯನ್ನು ನೀಡತಕ್ಕದ್ದು:

ಪರಂತು, ಪ್ರಾಧಿಕಾರಗಳು ಸದರಿ ಹದಿನೈದು ದಿನಗಳೊಳಗೆ ಯಾವುದೇ ಅಭಿಪ್ರಾಯ ಸಲ್ಲಿಸದಿರುವ ಸಂದರ್ಭದಲ್ಲಿ, ಅರ್ಜಿಗನುಸಾರ ಸದರಿ ಭೂ ಬಳಕೆ ಬದಲಾವಣೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸತಕ್ಕದ್ದು:

ಮತ್ತು ಪರಂತು, ಡೆಪ್ಯುಟಿ ಕಮಿಷನರನು ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಬಗ್ಗೆ ತನ್ನ ತೀರ್ಮಾನವನ್ನು ನೀಡಲು ಮತ್ತು ಈ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಲು ವಿಫಲನಾದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರನು ಭೂ ಬಳಕೆ ಬದಲಾವಣೆಗಾಗಿ ಅನುಮೋದನೆಯನ್ನು ನೀಡಿದ್ದಾರೆಂದು ಭಾವಿಸತಕ್ಕದ್ದು ಮತ್ತು ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಸಂದಾಯಕ್ಕೆ ಒಳಪಟ್ಟು ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಹೊರಡಿಸತಕ್ಕದ್ದು.

**XXX XXX XXX**

**92ಎ. ಅಪರಾಧಗಳು ಮತ್ತು ದಂಡನೆಗಳು.-** ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಯಾರಾದರೂ ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧವನ್ನು ಮಾಡಿದರೆ, ಅಂಥ ಪ್ರತಿಯೊಂದು ಅಪರಾಧಕ್ಕೆ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಂದ ಅಪರಾಧ ನಿರ್ಣಾಯವಾದ ನಂತರ ಅದರ (3)ನೇ ಅಂಕಣದಲ್ಲಿ ನಮೂದಿಸಿರುವ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

ಕೋಷ್ಟಕ

| ಕ್ರ.ಸಂ. | ಅಪರಾಧ | ದಂಡನೆ |
|---|---|---|
| (1) | (2) | (3) |
| 1. | ಸರ್ಕಾರದ ಭೂಮಿಯನ್ನು ಹೊಂದುವ ಉದ್ದೇಶದಿಂದ ಯಾವುದೇ ಸರ್ಕಾರಿ ಭೂಮಿಯನ್ನು ಕಾನೂನುಬಾಹಿರವಾಗಿ ಪ್ರವೇಶಿಸುವುದು ಅಥವಾ ಸ್ವಾಧೀನಪಡಿಸಿಕೊಳ್ಳುವುದು.<br>ಪರಂತು, ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಬಾಣೆ ಭೂಮಿಗಳ ಅಥವಾ ಒತ್ತುವರಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಅಥವಾ 94ಎ, 94ಬಿ, ಮತ್ತು 94ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಬಾಕಿಯಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಒಂದು ವರ್ಷದ ಕಾರವಾಸ ಶಿಕ್ಷೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ |

| | | |
|---|---|---|
| 2. | ಮೋಸ ಮಾಡಿದ್ದರೆ ಮತ್ತು ಆ ಮೂಲಕ ಸರ್ಕಾರದ ಯಾವುದೇ ಭೂಮಿಯನ್ನು ದಾನದ ಮೂಲಕ ಅಥವಾ ಅನ್ಯಥಾ ಮಾರಾಟ, ಅಡಮಾನ, ವರ್ಗಾವಣೆ ಮಾಡುವ ಉದ್ದೇಶದಿಂದ ಅಪ್ರಾಮಾಣಿಕವಾಗಿ ದಸ್ತಾವೇಜುಗಳನ್ನು ಸೃಷ್ಟಿಸಿದ್ದರೆ. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |
| 3. | ಆ ಉದ್ದೇಶಕ್ಕಾಗಿ ಅದನ್ನು ಬಳಸುವ ಉದ್ದೇಶದಿಂದ ಸರ್ಕಾರದ ಭೂಮಿಗೆ ಸಂಬಂ ಅಥವಾ ಅಂಥ ಜಮೀನನ್ನು ಕಬಳಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದರೆ | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ. |
| 4. | ಸರ್ಕಾರದ ಭೂಮಿಯನ್ನು ಅನಧಿಕೃತ ಅಧಿಭೋಗವನ್ನು ವರದಿ ಮಾಡುವ ಅಥವಾ ಅಂಥ ಅನಧಿಕೃತ ಅಧಿಭೋಗದಾರರನ್ನು ತೆರವುಗೊಳಿಸಲು ಕ್ರಮವನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ಯಾವ ರೆವಿನ್ಯೂ ಅಧಿಕಾರಿಗೆ ವಹಿಸಿಕೊಡಲಾಗಿದೆಯೋಆ ರೆವಿನ್ಯೂ ಅಧಿಕಾರಿಯು ವರದಿ ಮಾಡುವುದಕ್ಕೆ ಅಥವಾ ಅಂಥ ಅನಧಿಕೃತ ಅಧಿಭೋಗದಾರರನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವುದಕ್ಕೆ ವಿಫಲರಾಗಿದ್ದರೆ:<br>ಪರಂತು, ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಕಂದಾಯ ಮುಕ್ತ ಅರಣ್ಯ ಭೂಮಿಗಳಿಗೆ ಅಥವಾ ಒತ್ತುವರಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಅಥವಾ ಅಧಿನಿಯಮದ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಬಾಕಿಯಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |
| 5. | ಕೃಷಿಯೇತರ ಉದ್ದೇಶಕ್ಕಾಗಿ ಯಾವುದೇ ಕೃಷಿ ಭೂಮಿಯನ್ನು ಸಕ್ರಮ ಪ್ರಾಧಿಕಾರದಿಂದ ಪರಿವರ್ತನೆಗೊಳಿಸಿಕೊಳ್ಳದಯೇ ಅಥವಾ ಮುಂಚಿತವಾಗಿ ಅನುಮೋದನೆ ಪಡೆಯದಯೇ ಮಾರಾಟ ಮಾಡಿದರೆ:<br>ಪರಂತು, ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವುದರ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |
| 6. | ಕೃಷಿಯೇತರ ಬಳಕೆಗಾಗಿ ಕೃಷಿ ಭೂಮಿಯನ್ನು ಪರಿವರ್ತಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸುವುದು ಅಥವಾ ಕೃಷಿಯೇತರ ಉದ್ದೇಶಕ್ಕಾಗಿ ಬಳಸುವುದಕ್ಕೆ ಕೃಷಿ ಭೂಮಿಯ ಹಿಡುವಳಿದಾರನಿಗೆ ಅಧಿಕಾರ ನೀಡುವುದು. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ. |
| 7. | ಯಾವ ಸಾರ್ವಜನಿಕ ನೌಕರನಿಗೆ ದಾಖಲೆಗಳನ್ನು ನಿರ್ವಹಣೆ ಮಾಡಲು ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆಯೋ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಅನಧಿಕೃತ ಪರಿವರ್ತನೆಯ ಬಗ್ಗೆ ವರದಿ ಮಾಡುವ | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |

| | | |
|---|---|---|
| | ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆಯೋ ಆ ಸಾರ್ವಜನಿಕನು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಲು ಅಥವಾ ಕೃಷಿಯೇತರ ಉದ್ದೇಶಗಳಿಗಾಗಿ ರೆವಿನ್ಯೂ ಭೂಮಿಗಳನ್ನು ಅನಧಿಕೃತವಾಗಿ ಪರಿವರ್ತಿಸುವುದರ ವಿರುದ್ಧ ಕ್ರಮ ತೆಗೆದುಕೊಳ್ಳಲು ವಿಫಲನಾಗಿದ್ದರೆ:<br>ಪರಂತು, ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸುವಂಥ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | |
| 8. | ಈ ಅಧಿನಿಯಮದ ಮೇರೆಗೆ ಹೊರಡಿಸಲಾದ ಯಾವುದೇ ಕಾನೂನು ಆದೇಶಗಳನ್ನು ಉಲ್ಲಂಘಿಸಿದ್ದರೆ. | ಮೊದಲನೇ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಎರಡನೇ ಮತ್ತು ತರುವಾಯದ ಅಪರಾಧಗಳಿಗೆ ಐದು ಪಟ್ಟು ಜುಲ್ಮಾನೆ. |

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500+100, 11ನೇ ಆಗಸ್ಟ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SEVENTH SESSION**

# THE KARNATAKA LAND REFORMS AND CERTAIN OTHER LAW (AMENDMENT) BILL, 2025

**(LA Bill No. 51 of 2025)**

A Bill further to amend the Karnataka Land Reforms Act, 1961 and Karnataka Land Revenue Act, 1964.

Whereas it is expedient further to amend the Karnataka Land Reforms Act, 1961 (Karnataka Act No. 10 of 1962) and the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Seventy sixth year of the Republic of India, as follows:-

**1. Short title and commencement.-** (1) This Act may be called the Karnataka Land Reforms and Certain Other Law (Amendment) Act, 2025.

(2) It shall come into force at once.

**2.Amendment of Karnataka Act No.10 of 1962.-** In the Karnataka Land Reforms Act, 1961 (Karnataka Act No. 10 of 1962),-

(i) in section 109,-

(a) in sub-section (1A), in the proviso, for the words "half hectare" the words "four hectare" shall be substituted;

(b) in sub-section (2), in the proviso, for the words “by the Government, for sale of the land for the same purpose” the words “by the High Power Committee headed by the Chief Secretary for use or sale of the land for any purpose” shall be substituted.

(ii) in section 124, for the words and figures “sections 193, 219 and 228 of the Indian Penal Code” the wordsand figures and brackets “sections 229, 257 and 267 of the Bharatiya Nyaya Sanhita, 2023 (Central Act 45 of 2023)”, shall be substituted;

(iii) in section 125,-

(a) in sub-section (1), for the table the following shall be substituted, namely:-

**“Table**

| **Section** | **Penalty which may be imposed (Rs.)** |
|---|---|
| Section 12 | 5,000 |
| Section 33 | 2500 |
| Section 41 | 5,000 |
| Section 129 | 1,000 |

”

(b) in sub-section (1-A), for the words “imprisonment which shall be not less than six months but which may extend to one year or with fine which shall be five thousand rupees” the words “with penalty which shall be fifty thousand rupees”, shall be substituted.

**3. Amendment of Karnataka Act No.12 of 1964.-** In the Karnataka Land Revenue Act, 1964 (Karnataka Act No. 12 of 1964),-

(i) in section 94B, in sub-section (1) for the words "within twenty two years", the words "within twenty six years" shall be and shall always be deemed to have been substituted

(ii) in section 95,-

(a) in sub-section (2), in clause (ii), after the second proviso, the following shall be inserted, namely:-

“Provided also that, no diversion of land for non-agricultural purpose shall be required, if agricultural land upto 2.00 acres is used for establishing new industries”.

(b) for sub-section (10), the following shall be substituted, namely:-

"(10) The conversion of land for non-agricultural purpose as required under sub-section (2) is exempted for the land parcels required for establishing Renewable Energy Projects in the state subject to payment of the prescribed fees to the concerned Authorities under sub-section (7)."

(iii) in section 192-A, in the table, for the entries in serial number 5, the following shall be substituted, namely:-

"

| | | |
|---|---|---|
| (5) | Sells any agricultural land for non-agricultural purposes without getting such land converted or without obtaining prior approval of the competent authority.<br><br>Provided that it shall not apply to cases which are regularized by the government by formulating a special scheme in this behalf. | The penalty of rupees one lakh. |

"

## STATEMENT OF OBJECTS AND REASONS

It is considered necessary further to amend the Karnataka Land Reforms Act, 1961 (Karnataka Act 10 of 1962) and Karnataka Land Revenue Act, 1964 (Karnataka Act No. 12 of 1964) to,-

(i) give effect to the Budget Speech of 2025-26;

(ii) encourage renewable energy projects for generation of clean energy; and

(iii) adopt the provisions on the lines of the Jan Vishwas (Amendment of Provisions) Act, 2023 (Central Act 18 of 2023).

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**KRISHNA BYREGOWDA**
Minister for Revenue

**M.K. VISHALAKSHI**
Secretary
Karnataka Legislative Assembly

**ANNEXURE**
**EXTRACT FROM THE KARNATAKA LAND REFORMS ACT, 1961**
**(Karnataka Act 10 of 1962)**

**XXX XXX XXX**

**109. Certain lands to be exempt from certain provisions.**-(1) Subject to such rules as may be prescribed and the provisions of the Karnataka Town and Country Planning Act, 1961 (Karnataka Act 11 of 1963), the State Government may, by notification, exempt, any land in any area from the provisions of sections 63 or 80 to be used for,—

(i) industrial development, the extent of which shall not exceed forty units;

**Explanation.-**Industrial development‖ includes mining of minor minerals, whether specified or non-specified and stone crushing activity under the Karnataka Regulation of Stone Crushers Act, 2011 (Karnataka Act 8 of 2012)

Provided that in respect of Industrial development, such Land to such extent approved by the Government with approval of the State High level clearance committee or the State level single window clearance committee constituted under the Karnataka Industries (facilitation) Act, 2002 (Karnataka Act 45 of 2003) shall be deemed to have exempted by the Government from the provisions of section 63 or 80.

(ii) educational institutions recognised by the State or Central Government to be used for non-agricultural purpose the extent of which shall not exceed eight units;

(iii) places of worship to be specified by Government by notification which are established or constructed by a recognised or registered body for non-agricultural purpose, the extent of which shall not exceed two units;

(iv) a housing project, approved by the State Government the extent of which shall not exceed twenty units;

(v) the purpose of horticulture including floriculture and agro based industries the extent of which shall not exceed forty units:

Provided that the Deputy Commissioner may also exercise the powers of the State Government under this sub-section, subject to the restrictions and in the manner specified therein, in respect of the land to be used for,-

(i) industrial development, the extent of which shall not exceed twenty units;

(ii) educational institutions recognised by the State or Central Government to be used for non-agricultural purpose the extent of which shall not exceed four units;

(iii) places of worship to be specified by Government by notification which are established or constructed by a recognised or a registered body for non-agricultural purpose, the extent of which shall not exceed half of a unit (2.22 acre);

(iv) a housing project, approved by the State Government the extent of which shall not exceed twenty units;

(v) the purpose of horticulture including floriculture and agro based industries the extent of which shall not exceed twenty units;

(1A) Notwithstanding anything contained in sub-section (1), the State Government may in public interest and for reasons to be recorded in writing, 4[by notification and subject to the provisions of the Karnataka Town and Country Planning Act, 1961 (Karnataka Act 11 of 1963) and such restrictions and conditions as may be specified by it, exempt any extent of land from the provisions of sections 63 or 80 for any specific purpose.

Provided that the Deputy Commissioner other than the Deputy Commissioner of Bangalore Rural District and the Deputy Commissioner of Bangalore District, may subject to the restrictions and the manner specified in this sub-section exercise the power of the State Government to grant exemptions to an extent not exceeding half hectare of land.

**XXX XXX XXX**

(2) Where any condition or restriction specified in the notification under sub-section (1), has been contravened, the State Government or as the case may be, the Deputy Commissioner mayafter holding an enquiry as it or he deems fit, cancel the exemption granted under that sub-section and the land in respect of which such cancellation has been made, shall, as penalty be forfeited to and vest in the State Government free from all encumbrances. No amount is payable therefor.

Provided that, any company or organization after obtaining permission under subsection (1), purchases the land and if such company or organization after utilizing the land for not less than seven years for the purpose of purchase, does not continue to use the land due to various reasons which are beyond its control, after seven years so permitted under rules from the date of such purchase, may on an application be permitted, by the Government, for sale of the land for the same purpose.

**XXX XXX XXX**

**124. Enquiries and proceedings.**- All enquiries and proceedings before the Deputy Commissioner, the Tribunal the Assistant Commissioner or the Tahsildar or the Karnataka Appellate Tribunal shall be deemed to be judicial proceedings within the meaning of sections 193, 219 and 228 of the Indian Penal Code.

**XXX XXX XXX**

**125. Offences and penalties.-(**1) Whoever contravenes any provision of any of the sections, mentioned in the first column of the following table shall, on conviction, by a magistrate, for each such offence be punished with fine which may extend to the amount mentioned in that behalf in the second column of the said table.

**TABLE**

| Section | Fine which may be imposed |
|---|---|
| 1 | 2 |
| Section 12 | Rs.<br>1,000 |
| Section 33 | 500 |
| Section 41 | 1,000 |
| Section 129 | 250 |

**XXX XXX XXX**

## ANNEXURE
## EXTRACT FROM THE KARNATAKA LAND REVENUE ACT, 1964
## (Karnataka Act 12 of 1964)

**94B. Grant of land in certain cases.-**(1) Notwithstanding anything contained in this Act, if the Deputy Commissioner or other officer authorised by the State Government in this behalf is satisfied after holding such enquiry as he deems fit, that a person,-

(i) has, prior to the fourteenth day of April 1990 un-authorisedly occupied any land including land referred to in sub-section (2) of section 79 from which he is liable to be evicted under section 94; and

(ii) being eligible to grant of such land under section 94A has failed to apply for such grant under sub-section (4) of the said section within the period specified therein; and

Provided that nothing in this clause shall apply to a person who has become eligible for grant of land by virtue of the Karnataka Land Revenue (Amendment) Act, 1997;

(iii) has continued to be in actual possession of such land on the date of commencement of the Karnataka Land Revenue (Amendment) Act, 1997:

-he may within twenty two years from the date of commencement of the Karnataka Land Revenue (Amendment) Act, 2000 and subject to such rules, as may be prescribed make recommendations to the Committee or the Additional Committee, as the case may be constituted under section 94A and such Committee may on receipt of the recommendation grant the land to such person:

Provided that if an application made under section 94A by any other person for grant of the same land is pending consideration under that section the Committee, or the Additional Committee, as the case may be, shall consider the claim of such other person before granting the land under this sub-section:

Provided further that where prior approval of the Central Government under section 2 of the Forest Conservation Act, 1980 (Central Act 69 of 1980) is required for grant of any land under this section, such grant shall not be made without such prior approval.

(2) The provisions of the first proviso, second proviso, including the table and the Explanation in sub-section (4) and of sub-sections (5) and (6) of section 94A shall apply mutatis mutandis in respect of the grant of land made under sub-section (1).

(3) Nothing in this section shall apply to forest land except any land referred to in sub-section (2) of section 79 which is classified as forest land.

**XXX XXX XXX**

**95. Uses of agricultural land and the procedure for use of agricultural land for other purpose.- xxx xxx xxx**

(2) If any occupant of a land assessed or held for the purpose of agriculture wishes to divert such land or any part thereof to any other purpose, he shall submit an affidavit along with an application to the Deputy Commissioner in the manner as may be prescribed and if the diversion is sought,-

(i) The permission of the Deputy Commissioner shall not be required for diversion of lands for non-agricultural purposes, if such lands assessed or held for the purpose of agriculture, is as per the land use as specified in the Master Plan

duly published, for the concerned land under the provisions of the Karnataka Town and Country Planning Act, 1961(Karnataka Act 11 of 1963):

Provided that, the prescribed fee under sub-section (7) shall be paid to the concerned Town Planning Authority at the time of obtaining requisite permissions from the Authority along with self declaration as may be prescribed.

Provided further that, no diversion of land for non-agricultural purpose shall be required, if agricultural land up to 2.00 acres is used for establishing new industries, if such lands assessed or held for the purpose of agriculture, is as per the land use as specified in the Master Plan duly published, for the concerned land under the provisions of the Karnataka Town and Country Planning Act, 1961 (Karnataka Act 11 of 1963) with approval of the State Government.

(ii) If any occupant of a land assessed or held for the purpose of agriculture wishes to divert such land or any part thereof to any other purpose and if such lands are falling outside the Local Planning Area for which the Master Plan has not been published, the applicant shall submit an affidavit along with an application to the Deputy Commissioner in such manner as may be prescribed.

The concerned authorities shall furnish their opinion within fifteen days from the date of receipt of the application. The Deputy Commissioner shall issue the approval for diversion for use as per the application, subject to the opinion furnished by the concerned authorities and subject to payment of the fee as prescribed under sub-section (7):

Provided that, if opinion is not furnished within the said period of fifteen days, it shall be deemed that the concerned authorities have no objection to the said diversion of land for use as per the application.

Provided further that, in case the Deputy Commissioner fails to give his decision and issues the order under this sub-section within thirty days from the date of receipt of the application, the approval of the diversion for use shall be deemed to have been granted by the Deputy Commissioner and the same shall be certified and issued in such manner as may be prescribed subject to payment of fee as prescribed under sub-section (7).

**XXX XXX XXX**

**192-A.- Offences and Penalties.-** Notwithstanding anything contained in the Act or the rules made thereunder whoever commits any of the offence specified in column (2) of the Table below, shall on conviction by a judicial Magistrate of first class for each of such offence be punishable with the sentence indicated in column (3) thereof,-

**TABLE**

| **Sl.No** | **Offence** | **Punishment** |
|---|---|---|
| (1) | (2) | (3) |
| (1) | Unlawfully enters or occupies on any Government land with the intention of holding that Government land. Provided that it shall not apply to cases of Jamma, Bane lands in Coorg District or encroached government lands regularised or pending for regularization before | Imprisonment for one year and fine of rupees five thousand. |

| | | |
|---|---|---|
| | the Committee constituted under sections 94A, 94B and 94C of the Act. | |
| (2) | Cheats and thereby dishonestly creates documents for the purpose of selling, mortgaging or transferring by gift or otherwise of any Government land. | Imprisonment for three years and fine of rupees ten thousand |
| (3) | Creates a forged document regarding Government lands with an intention to use it for that purpose or to grab such land. | Imprisonment for three years and fine of rupees five thousand |
| (4) | Being a Revenue Officer entrusted with the responsibility of reporting unlawful occupation of Government land or initiating action to remove such unauthorised occupiers fails to report or take action to remove such unlawful occupants. Provided that it shall not apply to cases of Jamma, Bane lands in Coorg District or encroached government lands regularised or pending for 104 regularization before the Committee constituted under sections 94A, 94B and 94C of the Act: | Imprisonment for three years and fine of rupees ten thousand. |
| (5) | Sells any agricultural land for nonagricultural purposes without getting such land converted or without obtaining prior approval of the competent authority. Provided that it shall not apply to cases which are regularized by the government by formulating a special scheme in this behalf. | Imprisonment for three years and fine of rupees ten thousand. |
| (6) | Creates a forged document, regarding conversion of agricultural land for non-agricultural use or authorising the holder of agricultural land to use for non-agricultural purpose. | Imprisonment for one year and fine of rupees five thousand. |
| (7) | Being a public servant entrusted with the responsibility of maintaining records or entrusted with the responsibility of | Imprisonment for three years and fine of rupees ten thousand. |

| | | |
|---|---|---|
| | reporting unlawful conversion to the competent authority fails to report to the competent authority or to initiate action against unlawful conversion of revenue lands for non-agricultural purposes. Provided that it shall not apply to cases which are regularized by the government by formulating a special scheme in this behalf. | |
| (8) | Contravenes any lawful order passed under this Act. | With fine which may extend to five thousand rupees for the first offence and five times the fine for the second and subsequent offences |

**XXX XXX XXX**

Govt. Press, Vikasa Soudha, Bengalur, 11th August, 2025, P7, W.D. , Copies 500+100